ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅಲ್ಲಿ ಮಳೆಯೇ ಇಲ್ಲದೆ ಆಹಾರಸಾಮಗ್ರಿಗಳಿಗೆ ಕೊರತೆಯಾಗಿರುವ ಈ ಕಾಲದಲ್ಲಿ ಆಹಾರಸಾಮಗ್ರಿಗಳನ್ನು ಅವರಿಗೆ ಕೊಡುವುದರಿಂದ ಅನುಕೂಲವಾಗುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಮಳೆ ಚೆನ್ನಾಗಿ ಆಗಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ದವಸವೂ ಕೂಡ ಅಲ್ಲಿ ಸುಟ್ಟುಹೋಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಪಟ್ಟಿ ಮಾಡಿ ಏನೇನು ಬೇಕೆಂದು ಹೇಳಿದರೆ, ಏನೇನು ಪರಿಹಾರ ಕೊಡುವುದಕ್ಕೆ ಸಾಧ್ಯವೋ ಅದನ್ನು ಕೊಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಆ ತಾಲ್ಲೂಕಿನಲ್ಲಿರತಕ್ಕ ಹುಲ್ಲಿನ ಮನೆಗಳನ್ನು ತೆಗೆದು ಹೆಚಿನ ಮನೆಗಳನ್ನಾಗಿ ಮಾಡಬೇಕೆಂದು ಕಡ್ಡಾಯವಾಗಿ ವಿಧಾಯಕ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಯಾವುದನ್ನೂ ಹೇಳಲಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನಿಮ್ಮ ತರಗತಿಗಳವರಿಗೆ ಮನೆಗಳನ್ನು ಕಟ್ಟುವುದಕ್ಕೆ ಹಣವನ್ನು ಕೊಡುತ್ತಿದ್ದೀರಲ್ಲ, ಆ ಹಣವನ್ನು ಇಲ್ಲಿ ಮನೆ ಸುಟ್ಟು ಹೋಗಿರುವವರಿಗೆ ಕೊಡುವುದಕ್ಕೆ ಪ್ರಥಮ ಸ್ಥಾನ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ತರಗತಿಯವರಾಗಿದ್ದರೆ ಕೊಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಹಳ್ಳಿಗಳಲ್ಲಿ ಅನೇಕ ಸಾರಿ ಕುಡಿಯುವ ನೀರಿಗೆ ತೊಂದರೆಯಾಗಿದೆಯೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೋದ ಸಾರಿಯೂ ಆ ಕಡೆ ನೀರು ಬಂದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಳೆಯಿಲ್ಲದೆ ಬತ್ತನೆಯೇ ಆಗದಿರುವುದೂ ಮತ್ತು ಬತ್ತನೆಯಾಗಿದ್ದೂ ಫೈರೆಲ್ಲಾ ಸುಟ್ಟುಹೋಗುವುದೂ ಎರಡೂ ಒಂದೇ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಎರಡೂ ಒಂದೇ ಅಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅವರಿಗೂ ಕಂದಾಯದ ರೆಮಿಷನ್ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಶಿವಮೊಗ್ಗ ತಾಲ್ಲೂಕಿನಲ್ಲಿ ಆಗಲೇ ಕಂದಾಯದ ರೆಮಿಷನ್ ಕೊಟ್ಟಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನೀವಿಲ್ಲಿ ಕಂದಾಯದ ರೆಮಿಷನ್ ಮಾಡಿದೆಯೆಂದು ಹೇಳುತ್ತೀರಿ; ಆದರೆ ಅಲ್ಲಿ ಕಂದಾಯ ವಸೂಲು ಮಾಡುತ್ತಿರುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಅಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅಲ್ಲಿ ಕಳೆದ ಐದು ವರ್ಷಗಳಿಂದಲೂ ಮಳೆ ಹೋಗಿದೆಯೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ವರ್ಷಗಳಲ್ಲಿ ಮಳೆ ಆಗಿದೆ. ಕೆಲವು ವರ್ಷಗಳಲ್ಲಿ ಆಗಿಲ್ಲ.

ಶ್ರೀ ಎಸ್ ಆರ್. ನಾಗಪ್ಪಶೆಟ್ಟಿ.—ತುಂಗಾನದಿಯ ಪಕ್ಕದಲ್ಲೂ ನಾರೆ ಕಟ್ಟಿಸಿಕೊಟ್ಟ ರೈತರಿಗೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದೇ ಪ್ರಯತ್ನ ನಡೆಯುತ್ತಿದೆ.

Water Supply to cities of Bangalore, Mysore and Kolar Gold Fields.

Q.—**186.** Sri G. PAPANNA (Sidlaghatta-Chickballapur).—

Will the Government be pleased to state:—

(*a*) whether water supply to Bangalore, Mysore and Kolar Gold Fields Cities is made by the Government or the concerned municipalities;

(*b*) the capital invested till now to provide water supply to these three cities and the revenue derived therefrom for the past three years (figures to be given separately in respect of each)?

A.—Sri Kadidal MANJAPPA (Minister for Revenue and Public Works).—

(*a*) Water supply is made by Government to Bangalore, Mysore and Kolar Gold Fields.

(*b*) Capital invested—

Bangalore—Rs. 1,36,48,274.
Mysore—Rs. 18,97,203.
Kolar Gold Fields—
Rs. 26,37,915.

Revenue realised—

Years	*Bangalore* Rs.	*Mysore* Rs.	*K.G.F.* Rs.
1950-51...	12,10,161	2,18,483	2 25,099
1951-52...	13,62,823	2,55,807	2,54,743
1952-53...	15,38,781	2,69,763	2,94,333

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ತುಂಗಾನದಿಯ ಎರಡು ಪಕ್ಕಗಳಲ್ಲೂ ನಾರೆ ಕಟ್ಟಿಸಿಕೊಟ್ಟು, ರೈತರಿಗೆ ಅನುಕೂಲಮಾಡಿಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದೇ ಪ್ರಯತ್ನ ನಡೆಯುತ್ತಿದೆ.

ಶ್ರೀ ಜಿ. ಪಾಪಣ್ಣ.—ಈ ಪಟ್ಟಣಗಳಿಗೆ ನೀರು ನರಬರಾಯಿ ಮಾಡುವುದಕ್ಕೆ ವರ್ಷಕ್ಕೆ ಬೆಚ್ಚ ಎಷ್ಟಾಗುತ್ತದೆ?

*Sri Kadidal MANJAPPA.—That information is not readily available. I will furnish it later on.

Feeder Channel and Minor Tank Projects in Chitaldrug District.

Q.—**204.** Sri Mulka GOVINDA REDDY (Chitaldrug).—

Will the Government be pleased to state:—

(*a*) how many projects regarding feeder channels and putting up minor

tanks in Chitaldrug are under investigation of the Public Works Department (names and nature of works to be given);

(*b*) whether they will give priority to these projects in view of ever-increasing distress conditions?

A.—Sri Kadidal MANJAPPA (Minister for Revenue and Public Works).—

(*a*) Feeder channels—12.
Minor tanks—10.
Statements are appended below.

(*b*) Yes. To the extent possible.

List showing the minor tanks in Chitaldrug District.
FRESH WORKS FOR 1953-54.

		Amount of Estimate Rs.
	Chitaldrug Division	
1.	Regrading Hirekerehally Feeder Channel in 4th mile ...	5,000
2.	Removing the rocky portion and deepening Hirekerehally Tank and Channel ...	5,000
3.	Opening out a Feeder Channel from Doddahalla to Gundlur Tank.	10,000
4.	Constructing a relieving weir and improvements to Gourasamudra inundation channel.	5,000
5.	Improvements to Amukundi feeder channel	5,000
6.	Constructing cross drainage works to Veerapura inundation channel.	5,000
7.	Constructing cross drainage works to Siddapura feeder channel	5,000
	Davangere Division	
1.	Constructing a new tank at Baramanaikanadurga, Holalkere Taluk.	6,000
2.	Constructing Gungiganur Tank, Holalkere Taluk	24,000
3.	Restoring Moti Tank, Davangere Taluk	50,000

Statement showing the names of 12 Feeder Channels in Chitaldrug District.

		Amount of Estimate
	Chitaldrug Division	
1.	Improvements to the feeder channel of Yalagodu Tank, Chitaldrug Taluk.	5,000
2.	Improvements to Rekalgere feeder, Challakere Taluk ...	63,000
3.	Opening a feeder channel from Maradisanjeevanakote to Jajur Tank, Challakere Taluk.	17,500
4.	Regrading Hirekerehally feeder channel in 4th mile, Molakalmuru Taluk.	5,000
5.	Removing the rocky portions and deepening Hirekerehally Tank and channel, Molakalmuru Taluk.	5,000
6.	Opening out a feeder channel from Doddahalla to Gundlur tank Molakalmuru Taluk.	10.000
7.	Constructing relieving weir and improvements to Gourasamudra inundation channel, Molakalmuru Taluk.	5,000
8	Improvements to Amukundi feeder channel, Molakalmuru Taluk.	5,000
9.	Constructing cross drainage works to Veerapura inundation channel, Molakalmuru Taluk.	5,000
10.	Constructing cross drainage works to Diddapura feeder channel, Molakalmuru Taluk.	5,000
	Davangere Division	
11.	Improving Holalkere-Hirekere feeder channel, Holalkere Taluk.	36,200
12.	Restoring Feeder channel to Belgur Tank, Hosadurga Taluk.	46,600

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ಪರಿಶಿಷ್ಟದಲ್ಲಿ ಈ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟಹಾಗೆ ಕೆಲವು ಕೆರೆಗಳ ಎಸ್ಟಿಮೇಟ್‌ಗಳು ಆಗಿ ಸರ್ಕಾರದ ಗಮನದಲ್ಲಿ ಹಾಲಿ ಇದ್ದರೂ ಕೂಡ ಅವುಗಳನ್ನಿಲ್ಲಿ ಸೇರಿಸಿಲ್ಲ; ಉದಾಹರಣೆಗೆ ಹಿರಿಯೂರು ತಾಲ್ಲೂಕಿನ ಬೀರೇಹಳ್ಳಿ ಕೆರೆಯನ್ನು ಕಟ್ಟಬೇಕೆಂದು 90,000 ರೂಪಾಯಿಗಳಿಗೆ ಎಸ್ಟಿಮೇಟ್ ಕೂಡ ಆಗಿದೆ. ಹಿಂದಯೇ ಒಮ್ಮೆ ಉತ್ತರ ಹೇಳುತ್ತಾ ಇದು ಸರ್ಕಾರದ ಅವಗಾಹನೆಯಲ್ಲದೆ ಯೆಂದು ಹೇಳಿದ್ದೀರಿ. ಹಾಗಿದ್ದರೂ ಇದರಲ್ಲೇನೂ ಅದನ್ನು ಸೇರಿಸಿಲ್ಲ.

*ಶ್ರೀ ಕಡಿದಾಳ್ ಮಂಜಪ್ಪ.—ತಾವು ಕೇಳಿದ ಫೀಡರ್ ಛಾನಲ್ ಈ ಸ್ಕೀಮಿನಲ್ಲಿ ಬರುವುದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅದನ್ನು ಆದಷ್ಟು ಬೇಗ ಮಂಜೂರುಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆ ಮಾಡುತ್ತೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಚಿತ್ರದುರ್ಗ ತಾಲ್ಲೂಕು, ಕಡಿಗಟ್ಟು ಕೆರೆಯ ಫೀಡರ್ ಛಾನಲ್ ಮಾಡುವುದಕ್ಕೆ ಎಸ್ಟಿಮೇಟ್ ಆಗಿ ಸರ್ಕಾರಕ್ಕೆ ಬಂದಿದೆ ಯೆಂದು ಗೊತ್ತಾಗಿದೆ. ಅದನ್ನೂ ಪರಿಶೀಲನೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—Fresh works ಎಂದು ಹೇಳಿ ರೇಕಲಗೆರೆ ಫೀಡರ್ ಛಾನಲ್‌ನ್ನು ಉತ್ತಮಪಡಿಸುವುದಕ್ಕಾಗಿ 63,0 0 ರೂಪಾಯಿ ಗಳ ಒಂದು ಎಸ್ಟಿಮೇಟ್ ಮಾಡಿದೆಯೆಂದು ಹೇಳಿದ್ದೀರಿ. ಇದು ಎಸ್ಟಿಮೇಟ್ ಆಗಿ ಎಷ್ಟು ವರ್ಷಗಳಾದವು?

Sri Kadidal MANJAPPA.—I cannot give you the date.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ಫೀಡರ್ ಛಾನ-ನ್ನು ತೆಗೆದುಕೊಳ್ಳುವುದರಿಂದ affected areas ಗಳಿಗೆ ಒಹಳ ಅನುಕೂಲವಾಗುತ್ತದೆಂಬುದು ಸರ್ಕಾರದವರಿಗೆ ಗೊತ್ತಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಸ್ವಲ್ಪ ಮಟ್ಟಿಗೆ ಅನುಕೂಲವಾಗುತ್ತದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆಷ್ಟೆ ಅಲ್ಲದೆ, ಇದರಿಂದ ನಾಲ್ಕು ಕೆರೆಗಳಿಗೆ ನೀರು ಬರುವುದಕ್ಕೆ ಅನುಕೂಲವಾಗುತ್ತದೆಂಬುದು ಸರ್ಕಾರದವರಿಗೆ ಗೊತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಅನುಕೂಲವಾಗುತ್ತದೆ, ನಿಜ. ಆದರೆ the taking up of the project depends upon the utility of the project, the availability of the funds and the readiness of the villagers to pay contribution.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಚಿತ್ರದುರ್ಗ ಡಿಸ್ಟ್ರಿಕ್ಟಿನ ಎಗ್ಜಿಕ್ಯೂಟಿವ್ ಇಂಜನಿಯರ್‌ರವರು ಈ ವಿಷಯದಲ್ಲಿ ಏನು ಬರೆದಿದ್ದಾರೆ?

Sri Kadidal MANJAPPA.—do not remember.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವರು ಹೇಳಿದ conditions ಎಲ್ಲವೂ ಇಲ್ಲಿ satisfy ಆಗುತ್ತದೆಂದು ಹೇಳಿದರೆ ಬೇಗ ಈ ಪ್ರಾಜೆಕ್ಟನ್ನು ಕೈಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ?

(No answer.)

WORKING OF THE MONEY LENDERS' ACT

Q.—228. **Sri M. CHIKKALINGAIAH** (Malavalli—Scheduled Castes).—

Will the Government be pleased to state:—

(*a*) when the Money Lenders' Act was passed and given effect to in Mysore State;

(*b*) whether there are any instances to show the violation of this Act and action taken therefor?

A.—**Kadidal MANJAPPA** (Minister for Revenue and Public Works).—

(*a*) The Money Lenders' Act was passed on 3rd July 1939 and was given effect to from 1st July 1940. Sections 7 and 8 of the Act (Licensing portions) were given effect to from 1st April 1949 as per Government Notfication No. S. R. 4659-Regis. 2-47-6, dated 11th March 1949.

(*b*) No.

ಶ್ರೀ ಎಂ. ಚಿಕ್ಕಲಿಂಗಯ್ಯ.—Money Lenders' Act ಪ್ರಕಾರ ಸರ್ಟಿಫಿಕೇಟ್‌ಗಳನ್ನು ಕೊಡುವ ಅಧಿಕಾರಿಗಳು ಯಾರು?

*ಶ್ರೀ ಕಡಿದಾಳ್ ಮಂಜಪ್ಪ.—ಯಾವ ಸರ್ಟಿಫಿಕೇಟುಗಳನ್ನು?

ಶ್ರೀ ಎಂ. ಚಿಕ್ಕಲಿಂಗಯ್ಯ.—ಲೈಸನ್ಸ್ ಕೊಡತಕ್ಕ ಅಧಿಕಾರ?

ಶ್ರೀ ಕಡಿದಾಳ್ ಮಂಜಪ್ಪ.—ನಬ್ ರಿಜಿಸ್ಟ್ರಾರ್ ರವರು.

ಶ್ರೀ ಎಂ. ಚಿಕ್ಕಲಿಂಗಯ್ಯ.—Periodical inspection ಮಾಡುವವರು ಯಾರು?

ಶ್ರೀ ಕಡಿದಾಳ್ ಮಂಜಪ್ಪ.—I think it is the Deputy Commissioner.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಬಗ್ಗೆ ವರದಿಯನ್ನು quarterly ಕಳುಹಿಸುತ್ತಾರೋ ಅಥವಾ annual ಆಗಿ ಕಳುಹಿಸುತ್ತಾರೋ?

ಶ್ರೀ ಕಡಿದಾಳ್ ಮಂಜಪ್ಪ.—Annual report ಬರುತ್ತದೆಂದು ನೆನಪು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇದುವರೆಗೂ ಈ ಬಗ್ಗೆ ಯಾವ ರೀತಿಯಾದ ವರದಿಯನ್ನೂ ತರಿಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಬಂದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಏನು ಕಾರಣ?

ಶ್ರೀ ಕಡಿದಾಳ್ ಮಂಜಪ್ಪ.—ರಿಪೋರ್ಟ್ ಬರದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ಎಂದು ಕೇಳಿದಿರಿ, ನಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೇನೆ.